ಅಧ್ಯಾಯ–೨
ಇತಿಹಾಸ

ತಾಲೂಕು ಕೇಂದ್ರ ಕೃಷ್ಣರಾಜನಗರವು ಮೊದಲು 'ಎಡತೊರೆ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಕಾವೇರಿ ತೊರೆಯ ಎಡೆಯಲ್ಲಿ ಈ ಊರು ಇರುವುದರಿಂದ ಆ ಹೆಸರು ಬಂದಿದೆ. ಜಿಲ್ಲೆಯಲ್ಲಿ ಹಿಂದಿನ ಕಾಲಕ್ಕೆ ಸೇರಿದ ಐತಿಹಾಸಿಕ ನೆಲೆಗಳು ಹಾಗೂ ಪ್ರಾಚ್ಯ ಅವಶೇಷಗಳು ಕಂಡುಬಂದಿವೆ. ಅದೇ ರೀತಿ ತಾಲೂಕಿನ ಗಡಿಯಾಗಿರುವ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್. ಪೇಟೆ ತಾಲ್ಲೂಕಿನ ವಿವಿಧ ಹಳ್ಳಿಗಳಲ್ಲಿ ನೂತನ ಶಿಲಾಯುಗ, ಬೃಹತ್ ಶಿಲಾಯುಗದ ನೆಲೆಗಳು ದೊರೆತಿವೆ. ಆದರೆ ಕೃಷ್ಣರಾಜನಗರ (ಎಡತೊರೆ) ತಾಲ್ಲೂಕಿನಲ್ಲಿ ಆದಿಮಾನವ ಸಂಸ್ಕೃತಿಯ ಅವಶೇಷಗಳು ಈವರೆಗೂ ಲಭ್ಯವಾಗಿಲ್ಲ. ಆದರೂ ಸಾಂದರ್ಭಿಕ ಆಧಾರದ ಮೇಲೆ ಈ ಪ್ರದೇಶವೂ ಆದಿಮಾನವ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿತ್ತೆಂದು ತರ್ಕಿಸಬಹುದಾಗಿದ್ದು, ಕ್ಷೇತ್ರಕಾರ್ಯದ ಮೂಲಕ ಖಚಿತಪಡಿಸಿಕೊಳ್ಳಬೇಕಾಗಿದೆ. ತಾಲೂಕಿಗೆ ಸಂಬಂಧಿಸಿದಂತೆ ಈವರೆಗೆ ೧೧೯ ಶಾಸನಗಳು ದೊರಕಿವೆ.

ಪೌರಾಣಿಕ ಹಿನ್ನೆಲೆ : ಎಡತೊರೆ ಪ್ರದೇಶದ ಚುಂಚನಕಟ್ಟೆ, ಹಿಂದೆ ದಂಡಕಾರಣ್ಯ ಪ್ರದೇಶವಾಗಿದ್ದು, ಶ್ರೀರಾಮ–ಸೀತೆ, ಲಕ್ಷ್ಮಣರು ಕೆಲಕಾಲ ಚುಂಚನಕಟ್ಟೆಯಲ್ಲಿದ್ದರಂದುಕ್ಷಿಣ 'ದಕ್ಷಿಣ ಕಾಶಿ' ಎಂದೇ ಪ್ರಸಿದ್ಧವಾಗಿರುವ ಕಾವೇರಿ ದಂಡೆಯಲ್ಲಿರುವ ಅರ್ಕೇಶ್ವರಲಿಂಗವು ಸಾಕ್ಷಾತ್ ಸೂರ್ಯದೇವನಿಂದ ಸ್ಥಾಪಿಸಲ್ಪಟ್ಟಿದ್ದೆಂದೂ ಅಭಿಪ್ರಾಯವಿದೆ. 'ಅರ್ಕ' ಎಂದರೆ ಸೂರ್ಯ. ಸೂರ್ಯನಿಂದಲೇ ಈಶ್ವರನು ಆರಾಧಿಸಲ್ಪಟ್ಟಿದ್ದರಿಂದ ಅರ್ಕೇಶ್ವರ ಎಂದು ಅದಕ್ಕೆ ಹೆಸರಾಯಿತೆಂದೂ ಹೇಳಲಾಗುತ್ತದೆ. ಪದ್ಮಾಪುರಾಣದಲ್ಲಿ ಅರ್ಕಪುಷ್ಕರಿಣಿಯ ಉಲ್ಲೇಖವಿದೆಯೆಂದು ಹೇಳಲಾಗುತ್ತದೆ. ಅಲ್ಲಿ ಶಿವರಾತ್ರಿ ಹಬ್ಬದ ಬೆಳಗಿನ ಹೊತ್ತು ಸೂರ್ಯ ಕಿರಣ ಶಿವಲಿಂಗದ ಮೇಲೆ ಬೀಳುವುದನ್ನು ನೋಡಲು ಪ್ರತಿ ವರ್ಷ ಸುಮಾರು ಜನರು ಬಂದು ಸೇರುತ್ತಾರೆ. ಈ ಪ್ರದೇಶದಲ್ಲಿ ಯಾಗ ಯಜ್ಞಗಳು ನಡೆಯುತ್ತಿದ್ದುದ್ದಕ್ಕೆ ಸಾಕ್ಷಿಯಾಗಿ ಕಾವೇರಿ ನದಿ ದಂಡೆಯಲ್ಲಿ ಅಲ್ಲಲ್ಲಿ ಬೂದಿ ಸಿಗುತ್ತದೆ. ಅನೇಕ ಋಷಿಮುನಿಗಳ ಅವಾಸಸ್ಥಾನವಾಗಿತ್ತು ಎನ್ನುವುದಕ್ಕೆ ಕುರುಹುಗಳಿವೆ. ಆ ಹಿನ್ನೆಲೆಯಲ್ಲಿ

ಇಲ್ಲಿಯ ಪುಷ್ಕರಿಣಿಗಳಲ್ಲಿ ಸ್ನಾನ ಮಾಡಿ ಸೂರ್ಯದೇವನ ಉಪಾಸನೆ ಮಾಡುವುದು, ಅರ್ಕೇಶ್ವರ ದೇವಾಲಯಕ್ಕೆ ಭಕ್ತಿಶ್ರದ್ಧೆಯಿಂದ ನಡೆದುಕೊಳ್ಳುವುದು ಈಗಲೂ ರೂಢಿಯಲ್ಲಿದೆ.

ಅಲ್ಲದೆ ಕಾವೇರಿ ನದಿಯ ಚುಂಚನಕಟ್ಟೆ ಜಲಪಾತದ ಬಳಿ ಸೀತೆಮಡು ಎಂದು ಗುರುತಿಸಲ್ಪಟ್ಟಿರುವ ಮಡು ಇದೆ. ಆಂಜನೇಯನನ್ನು ಭೇಟಿಯಾಗುವ ಮೊದಲು ಶ್ರೀರಾಮನು ಈ ಪ್ರದೇಶದಲ್ಲಿದ್ದನೆಂಬ ಅಭಿಪ್ರಾಯವಿದ್ದು, ಇಂದಿಗೂ ಅಲ್ಲಿಯ ಶ್ರೀರಾಮ ದೇವಾಲಯದಲ್ಲಿ ಆಂಜನೇಯ ವಿಗ್ರಹವಿಲ್ಲದೆ, ಶ್ರೀರಾಮ–ಸೀತೆ–ಲಕ್ಷ್ಮಣ ವಿಗ್ರಹಗಳು ಮಾತ್ರ ಇವೆ. ಕಾವೇರಿನದಿ ದಂಡೆಯ ಶ್ರೀರಾಮದೇವಾಲಯದ ಬಳಿ 'ಚುಂಚ' ಎಂಬುವನು ನಿರ್ಮಿಸಿದ ಅಣೆಯಿಂದಾಗಿ ಚುಂಚನಕಟ್ಟೆ ಎಂಬ ಹೆಸರು ಬಂದಿದೆಯಾದರೂ ಪುರಾಣ ಕಥೆಗಳು ರಾಮಾಯಣ ಮಹಾಭಾರತಕ್ಕೆ ಸಂಬಂಧಿಸಿದಂತೆ ಕೇಳಿಬರುತ್ತವೆ. ಚಿಕ್ಕ ಹನಸೋಗೆಯ ಶಾಂತೇಶ್ವರ ಬಸದಿ ಬಳಿಯಿರುವ ಸುಮಾರು ೧೧–೧೨ನೇಶತಮಾನಕ್ಕೆ ಸೇರಬಹುದಾದ ತೇದಿರಹಿತ ಶಾಸನ, ಶ್ರೀರಾಮನ ೬೪ ಜಿನಬಸದಿಗಳನ್ನು ನಿರ್ಮಿಸಿದ್ದು, ಮುಂದೆ ಅದರನ್ನು ಗಂಗ ಮಾರಸಿಂಗನು ಸಂರಕ್ಷಿಸಿದ್ದು, ನಂತರದಲ್ಲಿ ಚಂಗಾಳ್ವರಿಂದಲೂ ಜೀರ್ಣೋದ್ಧಾರಗೊಂಡಿತೆಂದು ಉತ್ಪ್ರೇಕ್ಷಿಸಿದೆ.

ಇತಿಹಾಸ ಕಾಲ : ರಾಜ್ಯದ ಇತಿಹಾಸವನ್ನು ಮೌರ್ಯ ಚಕ್ರವರ್ತಿ ಅಶೋಕನಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ಅವನ ಶಿಲಾ ಶಾಸನಗಳು ಸನ್ನತಿ, ಮಸ್ಕಿ, ಬ್ರಹ್ಮಗಿರಿ, ಉಡಗೋಲಂ, ಜಟ್ಟಿಂಗ, ರಾಮೇಶ್ವರ, ಗವಿಮಠ ಹಾಗೂ ಪಾಲ್ಕಿ ಗುಂಡುಗಳಲ್ಲಿ ಲಭಿಸಿದ್ದು, ಅದಕ್ಕೂ ಮೊದಲು ಜೈನಯತಿ ಭದ್ರಬಾಹು ಹಾಗೂ ಚಂದ್ರಗುಪ್ತ ಮೌರ್ಯರು ಶ್ರವಣಬೆಳಗೊಳಕ್ಕೆ ಭೇಟಿ ನೀಡಿದ್ದ ಅಂಶವನ್ನು ನಂತರದ ಕಾಲಕ್ಕೆ ಸೇರಿದ ಶಾಸನಗಳು ದಾಖಲಿಸಿವೆ. ಅಲ್ಲದೆ ಮೌರ್ಯರ ಆಳ್ವಿಕೆಯಲ್ಲಿ ಈ ಪ್ರದೇಶವು ಮಹಿಷ ಮಂಡಲ ಎಂದು ಖ್ಯಾತಿ ಪಡೆದಿದ್ದು, ಅಶೋಕನು ತನ್ನ ಧರ್ಮ ಮಹಾಮಾತ್ಯರನ್ನು ಬೌದ್ಧ ಧರ್ಮಪ್ರಸಾರಕ್ಕೆಂದು ಕಳಿಸಿದ್ದನೆಂದು ತಮಿಳು ಸಾಹಿತ್ಯಗ್ರಂಥಗಳು ದಾಖಲಿಸಿದೆಯಾದರೂ, ಇದರ ಬಗ್ಗೆ ಜಿಜ್ಞಾಸೆ ಮುಂದುವರಿದಿದೆ. ಕೃಷ್ಣರಾಜನಗರ ತಾಲೂಕಿನ ಶಾಸನಗಳಲ್ಲಿ (ತೊರೈನಾಡು)'ಎಡತೊರೆನಾಡು' [ಎ(ಯು)ಡ(ಡೆ)ತೊ(ದೊ)ರೆ(ಟೆ)ನಾಡು], ಎಡತೊಟೆನಾಡು–೧೦೦೦, ಎಡೆನಾಡು, ಮುಂತಾಗಿ ಕಾವೇರಿಯ ಎಡೆ ಪ್ರದೇಶವು ಗಂಗವಾಡಿ ೯೬೦೦೦ದ ಒಂದು ಆಡಳಿತ ವಿಭಾಗವಾಗಿ ಬಹಳ ಹಿಂದಿನಿಂದಲೂ ಪ್ರಸಿದ್ಧವಾಗಿದೆ. ತಾಲ್ಲೂಕಿನಲ್ಲಿ ದೊರೆತ ಶಾಸನಗಳು ಗಂಗ, ಚೋಳ, ಹೊಯ್ಸಳ, ಕೊಂಗಾಳ್ವ, ಚಂಗಾಳ್ವ, ವಿಜಯನಗರ, ಉಮ್ಮತ್ತೂರು, ಬೇಲೂರು ಮತ್ತು ಮೈಸೂರು ರಾಜ–ಮನೆತನಗಳ ಆಡಳಿತಕ್ಕೆ ಸಂಬಂಧಪಟ್ಟಿದ್ದಾಗಿವೆ. ಅದರಲ್ಲೂ ಪ್ರಧಾನವಾಗಿ ತಾಲೂಕಿನಲ್ಲಿ ಚಂಗಾಳ್ವ ಹಾಗೂ ಹೊಯ್ಸಳರು ಆಳ್ವಿಕೆ ನಡೆಸಿದ್ದು ಅವರಿಗೆ ಸಂಬಂಧಿಸಿದ ಶಾಸನಗಳೇ ಹೆಚ್ಚಾಗಿ ದೊರೆತಿವೆ.

ತಲಕಾಡಿನ ಗಂಗರು: ತಲಕಾಡನ್ನು ರಾಜಧಾನಿಯನ್ನಾಗಿಸಿಕೊಂಡು ಸುಮಾರು ಐದರಿಂದ ಹತ್ತನೇ ಶತಮಾನದವರೆಗೆ ಆಡಳಿತ ನಡೆಸಿದ ಗಂಗರ ಆಳ್ವಿಕೆಗೆ ಸಂಬಂಧಿಸಿದಂತೆ ತಾಲೂಕಿನಲ್ಲಿ ಲಭಿಸಿರುವ ಅತ್ಯಂತ ಪ್ರಾಚೀನ ದಾಖಲೆಯೆಂದರೆ ಶ್ರೀಪುರುಷನ ಸಾಲಿಗ್ರಾಮ

ತಾಮ್ರ ಶಾಸನ. ಇದು ಅವನ ಪಟ್ಟಾಭಿಷೇಕದ (೭೨೫) ಸಂಗತಿಯನ್ನು ತಿಳಿಸಿ, ಆ ಸಂದರ್ಭದಲ್ಲಿ ನೀಡಿದ ದತ್ತಿಯನ್ನು ದಾಖಲಿಸಿದೆ. ದತ್ತಿ ಪಡೆದ ವ್ಯಕ್ತಿ ದೂರದ ವಾತಾಪಿ(ಬಾದಾಮಿ)ಯ ನಾಗಶರ್ಮನ ಪುತ್ರ ಬಾಣಶರ್ಮ, ದತ್ತಿ ನೀಡಿದ ಗ್ರಾಮವು ತೇಗಟ್ಟೂರು ವಿಷಯದಲ್ಲಿದ್ದು 'ಬಾರದೂರು' ಎಂಬ ಅಭಿದಾನವನ್ನೂ ಹೊಂದಿತ್ತು. ಶ್ರೀಪುರುಷನ ಸಿಂಹಾಸನಾರೋಹಣವನ್ನು ದಾಖಲಿಸುವ ಮೂಲಕ ಇದು ಮಹತ್ವ ಪಡೆದಿದೆ. ಶಾಸನೋಕ್ತ ತೇಗಟ್ಟೂರು ವಿಷಯ ಬೆಂಗಳೂರು ತಾಲೂಕಿನ ತೇಗಲ್ಪಟ್ಟು ಪ್ರದೇಶವಿರಬೇಕೆಂದು ಎಂ.ಎಚ್. ಕೃಷ್ಣ ಗುರುತಿಸಿದ್ದಾರೆ. ಒಂದನೆಯ ಶಿವಮಾರನಿಗೂ ಶ್ರೀಪುರುಷ ಎಂಬ ಬಿರುದಿದ್ದ ಅಂಶ ಈ ಶಾಸನದಿಂದ ವೇದ್ಯವಾಗುತ್ತದೆ. ಗಂಗರ ಇತಿಹಾಸದಲ್ಲಿ ಇಂತಹುದೇ ಇನ್ನೊಂದು ಶಾಸನ, ಒಂದನೆಯ ಗಂಗರಾಚಮಲ್ಲನ ಸಾಲಿಗ್ರಾಮ ದಾನಶಾಸನ (೮೯೧). ಈ ತಾಮ್ರ ಶಾಸನದಿಂದ ಮರುಗಲೆ ವಿಷಯದ ಎಡೆದಿಣ್ಣೆ–೭೦ರಲ್ಲಿದ್ದ ಪೆರ್ಜ್ಜರಂಗಿ ಗ್ರಾಮವನ್ನು ದತ್ತಿಬಿಟ್ಟ ಅಂಶ ಗೊತ್ತಾಗುತ್ತದೆ. ಈ ಎಡೆದಿಣ್ಣೆ–೭೦, 'ಎಡತೊರೆ' ಆಡಳಿತ ಘಟಕವನ್ನೇ ಸೂಚಿಸುವಂತೆ ತೋರುತ್ತದೆ. ಆದರೆ ಗಳಿಗೇಕೆರೆ ಗ್ರಾಮದಲ್ಲಿ ದೊರೆತ ಗಂಗರ ತಾಮ್ರ ಶಾಸನವು ಕೂಟ ಶಾಸನ ಎಂಬ ಅಭಿಪ್ರಾಯವಿದೆಯಾದರೂ ಪುನರ್ ಪರಿಶೀಲಿಸುವ ಅಗತ್ಯವಿದೆ. ಈ ಶಾಸನದಲ್ಲಿ ವಿಕ್ತವಾಗಿರುವ ರಣವಿಕ್ರಮಯ್ಯನು ಶ್ರೀ ಪುರಷನ ಇನ್ನೊಬ್ಬ ಮಗ ವಿಜಯಾದಿತ್ಯನ ಮಗನಿರಬಹುದೆಂದು ತರ್ಕಿಸಲು ಅವಕಾಶವಿದೆ. ತಾಲೂಕಿನ ಚಿಕ್ಕಹನಸೋಗೆಯಲ್ಲಿ ಗಂಗದೊರೆ ಒಂದನೆಯ ಬೂತುಗ ಎರೆಯಪ್ಪನ ಉಲ್ಲೇಖವಿರುವ ಕ್ರಿ. ಶ. ೮೭೦ ವೀರಗಲ್ಲು ಶಾಸನವೊಂದು ದೊರೆತಿದೆ. ಕೋಗಿಯೂರ ಕಾಳಗವನ್ನು ಹೆಸರಿಸುತ್ತಾ ಗೋವಿಂದರನು ದತ್ತಿ ನೀಡಿದ್ದನ್ನು ಇದು ದಾಖಲಿಸಿದೆ. ಆದರೆ ಇದು ೧೦ನೇ ಶತಮಾನಕ್ಕೆ ಸೇರಿದೆ ಎಂಬ ಅಭಿಪ್ರಾಯವೂ ಅಷ್ಟೇ ಉಲ್ಲೇಖಾರ್ಹವಾಗಿದೆ. ಈ ಎಲ್ಲಾ ಶಾಸನಗಳು ಗಂಗರ ಪ್ರಭಾವಕ್ಕೆ ಈ ಪ್ರದೇಶ ಒಳಗಾಗಿದ್ದ ಅಂಶವನ್ನು ಸೂಚಿಸುತ್ತದೆ.

ಚೋಳರು: ಗಂಗರನ್ನು ಬಗ್ಗುಬಡಿದು ಗಂಗವಾಡಿ ಮೇಲೆ ಅಧಿಪತ್ಯ ಸ್ಥಾಪಿಸಿದ ಚೋಳರ ಆಡಳಿತಕ್ಕೂ ಈ ಪ್ರದೇಶ ಒಳಪಟ್ಟಿದ್ದು, ಅವರಲ್ಲಿ ಪ್ರಖ್ಯಾತನಾದ ಒಂದನೆಯ ರಾಜೇಂದ್ರ ಚೋಳನ ಕಾಲದ ಹಂಪಾಪುರ (೧೦೩೩) ಶಾಸನ ಚೆಂಗಾಳ್ವರೊಂದಿಗೆ ಹೋರಾಡುತ್ತಾ ಮಡಿದ ವೀರನೊಬ್ಬನ ವೀರಗಲ್ಲಾಗಿದ್ದರೆ, ಕುರುಬಳ್ಳಿಯ (೧೦೩೪) ಶಾಸನ, ಚೆಂಗಾಳ್ವ ನಾಯಕನು ಕಾಳಗದಿಂದ ಹಿಂತಿರುಗುವಾಗ, ದತ್ತಿ ನೀಡಿದ್ದನ್ನು ದಾಖಲಿಸಿದೆ. ಒಂದನೆಯ ಕುಲೋತ್ತುಂಗ ಚೋಳನ ಆಳ್ವಿಕೆಗೆ ಸೇರಿದ ೧೧೧೦೩ರ ತಿಪ್ಪೂರು ಶಾಸನ, ಚೋಳಗಂಗ ನಾಡಿನ ಚೋಳ ದಂಡನಾಯಕ ಚೋಳಗಂಗಣ್ಣನನ್ನು ಉಲ್ಲೇಖಿಸುತ್ತದೆ.

ಚಂಗಾಳ್ವರು: ಚಂಗಾಳ್ವರ ಪ್ರಥಮ ಉಲ್ಲೇಖ ತಾಲೂಕಿನ ಚಿಕ್ಕ ಹನಸೋಗೆಯ ಜೈನ ಶಾಸನಗಳಲ್ಲಿ ದೊರಕುತ್ತದೆ. ನೆರೆಯ ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲೂಕಿನ ಮಾಲಂಬಿ, ಮುಳ್ಳೂರು, ಮುಂತಾದ ಪ್ರದೇಶಗಳನ್ನು ಹೊಂದಿದ್ದ ಚಂಗಾಳ್ವರು, ಸಮಕಾಲೀನ ಸಾಮ್ರಾಟರ ಸಾಮಂತರಾಗಿದ್ದುಕೊಂಡು ಹನಸೋಗೆಯನ್ನು ರಾಜಧಾನಿಯಾಗಿಸಿಕೊಂಡು ಆಳ್ವಿಕೆ ನಡೆಸಿದ್ದಾರೆ.

ಚಂಗಾಳ್ವರ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರುವ ಚಿಕ್ಕಹನಸೋಗೆಯ ತ್ರಿಕೂಟ ಬಸದಿ, ಹಲವು ಶಾಸನಗಳನ್ನು ಹೊಂದಿದೆ. ಅಲ್ಲದೆ ಜೈನಧರ್ಮದ ಒಂದು ಗುರು ಪರಂಪರೆಯ ಬಗ್ಗೆ ವಿಶೇಷ ಬೆಳಕು ಚೆಲ್ಲುತ್ತದೆ. ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಜಯಕೀರ್ತಿಯು 'ಛಂದೋಶಾಸನ' ಗ್ರಂಥವನ್ನು ಬರೆದಿರುವ ಕವಿ. ಕ್ರಿ.ಶ.೧೧೦೦ರ ಶಾಸನದ ಪ್ರಕಾರ ದಿನಾಕರನಂದಿ ಯತಿಗಳ ಶಿಷ್ಯ ಜಯಕೀರ್ತಿ ಎಂಬುದು ಉಲ್ಲೇಖಾರ್ಹವಾಗಿದೆ. ಚಂಗಾಳ್ವರು ಮೂಲತಃ ಜೈನರು ಎಂಬುದು ಚಿಕ್ಕಹನಸೋಗೆ ಶಾಸನದಿಂದ ತಿಳಿಯುತ್ತದೆ. ಪರಧರ್ಮ ಸಹಿಷ್ಣುಗಳೂ ಆಶ್ರಿತ ರಕ್ಷಕರೂ ಆಗಿದ್ದ ಇವರು ಕಾಲಾಂತರದಲ್ಲಿ ಚದುರಿಹೋಗಿರುವರೆಂದು ಪ್ರತೀತಿಯಿದೆ. ಇವರ ಆಳ್ವಿಕೆಗೆ ಸಂಬಂಧಿಸಿದ ೧೨ ಶಾಸನಗಳು (ಸುಮಾರು ೧೧ ರಿಂದ ೧೭ನೇ ಶತಮಾನ) ತಾಲೂಕಿನಲ್ಲಿ ಲಭಿಸಿವೆ.

ಕೊಡಗು ಜಿಲ್ಲೆಯ ಅರೆಭಾಷೆ ಗೌಡರು, ಹನಸೋಗೆ ಹಾಗೂ ಸಾಲಿಗ್ರಾಮ ಮುಂತಾದ ಕಡೆ ವಾಸ ಮಾಡುವ ಅನೇಕರು ಜೈನರಾಗಿದ್ದಿರುವ ಸಾಧ್ಯತೆಗಳಿವೆ. ಎಡತೊರೆ ಭಾಗದ ಕಗ್ಗೆರೆ, ನಾರಾಯಣಪುರ, ಕಂಚಗಾರಕೊಪ್ಪಲು, ಬೀರ್ನಹಳ್ಳಿ ಕೊಡಗಿನ ಹೆಬ್ಬಾಲೆ, ಅರಕಲಗೂಡು ತಾ. ಕೆಲಹಳ್ಳಿಗಳಲ್ಲಿ ವಾಸವಿರುವ 'ನಾಮಧಾರಿ' ಗೌಡರು ಮೂಲತಃ ಜೈನರಾಗಿದ್ದು ಧರ್ಮ ಬಿಟ್ಟರೂ ಇಂದೂ ಸಸ್ಯಹಾರಿಗಳಾಗಿದ್ದು ತಾವು ಚಂಗಾಳ್ವ ವಂಶದವರೆಂದು ಹೇಳಿಕೊಳ್ಳುತ್ತಾರೆ. ಕೇರಳದ ವೈನಾಡಿನಲ್ಲಿರುವ ಜೈನಧರ್ಮಾವಲಂಬಿಗಳು, ಕಗ್ಗೆರೆ (ಹೆಚ್. ಡಿ. ಕೋಟೆ ತಾಲ್ಲೂಕು) ಮುಂತಾದೆಡೆಗಳಲ್ಲಿ ಬಹಳ ಹಿಂದೆಯೇ ವೈವಾಹಿಕ ಸಂಬಂಧವನ್ನು ಬೆಳೆಸಿರುವುದು ಉಲ್ಲೇಖಾರ್ಹ.

ಚಂಗಾಳ್ವರು, ಜೈನ, ಶೈವ, ವೈಷ್ಣವ ಧರ್ಮಗಳನ್ನು ಅನುಸರಿಸುವವರಾಗಿದ್ದು ಸುಮಾರು ೧೫ನೇ ಶತಮಾನದ ಹೊತ್ತಿಗೆ ವೀರಶೈವರಾದಂತೆ ಕಾಣುತ್ತದೆ. ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಚಂಗಾಳ್ವರನ್ನು ಶೈವರೆಂದೇ ಉಲ್ಲೇಖಿಸಲಾಗಿದೆ. ಚಿಕ್ಕ ಹನಸೋಗೆಯ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಹೆಚ್ಚಿನ ಶಾಸನಗಳು ಜೈನಧರ್ಮಕ್ಕೆ ಬಿಟ್ಟ ದತ್ತಿಶಾಸನಗಳಾಗಿದ್ದು, ಅವುಗಳಲ್ಲಿ ಒಂದು ಚಂಗಾಳ್ವ ರಾಜೇಂದ್ರಚೋಳನು ಅಭಯ ಜಿನಾಲಯವನ್ನು ಮಾಡಿಸಿದ್ದನ್ನು ತಿಳಿಸಿದರೆ, ಅದೇ ಊರಿನ ಇನ್ನೊಂದು ಶಾಸನ, ವೀರರಾಜೇಂದ್ರ ನನ್ನಿ ಚಂಗಾಳ್ವದೇವನು ಪುಸ್ತಕಗಚ್ಚಕ್ಕೆ ಸೇರಿದ ಈ ಬಸದಿಯ ನಿರ್ಮಾತೃ ಎಂದು ದಾಖಲಿಸಿದೆ. ಅಲ್ಲಿಯ ಇನ್ನೊಂದು ಶಾಸನ, ಹನಸೋಗೆಯ ಚಂಗಾಳ್ವರ ತೀರ್ಥದ ಎಲ್ಲಾ ಬಸದಿ, ಅಬ್ಬೆಯ ಬಸದಿ ಹಾಗೂ ತೊರೆನಾಡ ಬೆಳಿವಾಣಿಯ ಬಸದಿಗಳನ್ನು ಉಲ್ಲೇಖಿಸುತ್ತದೆ. ಶಾಂತೀಶ್ವರ ಬಸದಿಯ ಬಳಿಯಿರುವ ಸುಮಾರು ೧೧-೧೨ನೇ ಶತಮಾನದ ಶಾಸನವೊಂದರಲ್ಲಿ ಹನಸೋಗೆಯ ದೇಸಿಗಗಣದ ೬೪ ಬಸದಿಗಳನ್ನು ಪರಮೇಶ್ವರ ದತ್ತಿಯಾಗಿ ಶ್ರೀರಾಮನು ನಿರ್ಮಿಸಿ ದತ್ತಿ ನೀಡಿದ್ದು, ನಂತರದಲ್ಲಿ ಗಂಗ ಮಾರಸಿಂಹನಿಂದ ಸಂರಕ್ಷಿಸಲ್ಪಟ್ಟಿದ್ದ ಇವನ್ನು (ತೀರ್ಥದ ಬಸದಿ) ಯಾದವ ವಂಶದ ರಾಜೇಂದ್ರಚೋಳ ನನ್ನಿ ಚಂಗಾಳ್ವನು ಜೀರ್ಣೋದ್ಧಾರ ಮಾಡಿಸಿದನೆಂದು ಹೇಳುವುದರ ಜೊತೆಗೆ ತಲಕಾವೇರಿಯ

ಬಸದಿಗಳನ್ನೂ ಉಲ್ಲೇಖಿಸುತ್ತದೆ. ಶ್ರೀರಾಮನು ೬೪ ಜೈನ ಬಸದಿಗಳನ್ನು ನಿರ್ಮಿಸಿದನೆಂಬ ಅಪರೂಪದ ಉಲ್ಲೇಖವಿದಾಗಿದ್ದು, ಉತ್ಪ್ರೇಕ್ಷೆಯಿಂದ ಕೂಡಿದ್ದೆಂದು ಭಾವಿಸಲಾಗಿದೆ. ಆದಿನಾಥ ತೀರ್ಥಂಕರ ಶಿಲ್ಪವನ್ನು ಭಾನುಕೀರ್ತಿ ಪಂಡಿತದೇವರು ಪುನಃ ಪ್ರತಿಷ್ಠೆ ಮಾಡಿಸಿದ ಅಂಶವನ್ನು, ಇನ್ನೊಂದು ಶಾಸನ ದಾಖಲಿಸಿದೆ. ಚಿಕ್ಕಹನಸೋಗೆಯ ೧೧೧೦ರ ಶಾಸನ, ದಿವಾಕರನಂದಿ ಸಿದ್ಧಾಂತಿ ದೇವರ ಶಿಷ್ಯೆಯಾದ ಬಸವವ್ವೆ ಕಂತಿಯು ೩೦ ಗದ್ಯಾಣವನ್ನು ದತ್ತಿ ನೀಡಿದ್ದು, ದಂಡನಾಯ್ಕ ನಾಕಿಮಯ್ಯನು ಈ ಕಲ್ಲನ್ನು ಹಾಕಿಸಿದನೆಂದು ಹೇಳುತ್ತದೆ. ಸುಮಾರು ೧೫ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಬೊಮ್ಮಿಸೆಟ್ಟಿ ಈ ಗುಡಿಗೆ ನವರಂಗವನ್ನು ಸೇರಿಸಿದ್ದನ್ನು ತಿಳಿಸುತ್ತದೆ.

ಕೊಂಗಾಳ್ವರು : ಕೊಂಗಾಳ್ವರ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರದೇಶದ ಸಾಲಿಗ್ರಾಮದಲ್ಲಿ ದೊರೆತಿರುವ ಎರಡು ಶಾಸನಗಳು (೧೦೭೯ ಹಾಗೂ ೧೧೦೫) ವೀರಗಲ್ಲುಗಳಾಗಿದ್ದು, ತ್ರಿಭುವನಮಲ್ಲ ಕೊಂಗಾಳ್ವದೇವನ ಆಳ್ವಿಕೆಯನ್ನು ಲ್ಲೇಖಿಸುತ್ತಾ ಚಂಗಾಳ್ವರೊಂದಿಗಿನ ಯುದ್ಧದಲ್ಲಿ ಮಡಿದ ವೀರರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತವೆ.

ಹೊಯ್ಸಳರು : ಯಾದವ ಕುಲದವರಾದ ಹೊಯ್ಸಳರು ಗಂಗರ ಜೊತೆ ಸೇರಿ ಚೋಳರ ವಿರೊಧಿಗಳಾಗಿದ್ದು, ಹೊಯ್ಸಳ ವಿನಯಾದಿತ್ಯನು ಚಾಲುಕ್ಯ ಮನೆತನದೊಂದಿಗೆ ವೈವಾಹಿಕ ಸಂಬಧಗಳ ಮೂಲಕ ಹತ್ತಿರನಾಗಿ ಹೊಯ್ಸಳ ರಾಜ್ಯಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿದನಾದರೂ ಇವರಿಗೆ ಸಂಬಂಧಿಸಿದಂತೆ ತಾಲೂಕಿನಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಶಾಸನ ಹೊಯ್ಸಳ ವಿಷ್ಣುವರ್ಧನನ ೧೧೧೭ರ ಲಾಳನಹಳ್ಳಿ ಶಾಸನವಾಗಿದ್ದು, ದಂಡನಾಯಕ ಪುಣಿಸಮಯ್ಯ ಹಾಗೂ ಇತರರು ಶೈವ ಕರೆಕಂಠಜೀಯರ್ಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ನೆರಳೂರಿನ ೧೧೩೩ರ ಇನ್ನೊಂದು ಶಾಸನ ಬಿಳಿವಾಣಿಯ ಮಹಾದೇವರ ಸೇವೆಗೆಂದು ಅದೇ ಕರೆಕಂಠಜೀಯರ್ಗೆ ದೇವದಾನವಾಗಿ ಭೂಮಿ ಕೊಟ್ಟಿದ್ದನ್ನು ದಾಖಲಿಸುತ್ತದೆ. ಮಳಲಿಯ ೧೧೩೭ರ ಶಾಸನ ಮಂಟಪದ ನಿರ್ಮಾಣಕ್ಕೆಂದು ಭೂಮಿ ಖರೀದಿಸಿ ದಾನ ಬಿಟ್ಟ ಅಂಶವನ್ನು ತಿಳಿಸಿದರೇ ಅಲ್ಲೇ ಇರುವ ಮತ್ತೊಂದು ಶಾಸನ ಮಳಲಿಯ ಮಹಾದೇವನಿಗೆ ದತ್ತಿ ನೀಡಿದ ಅಂಶವನ್ನು ದಾಖಲಿಸಿದೆ. ಇದೇ ಅರಸನ ಹನಸೋಗೆಯ ಇನ್ನೊಂದು ಶಾಸನ ಹೊಸವೀಡಿನಲ್ಲಿ ಮಡಿದ ಯೋಧನ ಸಲುವಾಗಿ ನೀಡಿದ ವೀರಗಲ್ಲಾಗಿದೆ. ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ೧೧೭೪ರ ಹೆಬಸೂರಿನ ವೀರಗಲ್ಲು ಶಾಸನ ಬೋವನ ವೀರ ಮರಣವನ್ನು ದಾಖಲಿಸಿದರೆ, ಇದೇ ತೇದಿಗೆ ಸೇರಿದ ಬೀರನಹಳ್ಳಿಯ ಶಾಸನ ದೇವಾಲಯವೊಂದಕ್ಕೆ ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಇಮ್ಮಡಿ ನರಸಿಂಹನ ೧೨೨೦ರ ಮಿರ್ಲೆ ಶಾಸನ ಬಹಳ ಸವೆದಿದ್ದು ವಿವರ ಹಾಳಾಗಿದೆ. ಮುಮ್ಮಡಿ ನರಸಿಂಹನ ಕಾಲದ ೧೨೯೯ರ ದೆಗ್ಗನಹಳ್ಳಿ ಶಾಸನ, ದೆಗ್ಗನಹಾಳ ಗ್ರಾಮದ ಸಿದ್ಧಾಯವಾದ ೪೦ ಗದ್ಯಾಣವನ್ನು ಮಹಾಜನಗಳಿಗೆ ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ತಿಪ್ಪೂರು ಶಾಸನದಲ್ಲಿ ಹಲವಾರು ದಂಡನಾಯಕರ ಉಲ್ಲೇಖ ಕಂಡುಬರುತ್ತದೆ. ಚಿಕ್ಕಹನಸೋಗೆಯ ೧೩೪೨ರ ಒಂದು ಶಾಸನ ಮುಮ್ಮಡಿ ಬಲ್ಲಾಳನಿಗೆ

ಹಂಪೆವೊಡೆಯ ಎಂಬ ಮಗನಿದ್ದುದಾಗಿ ತಿಳಿಸುತ್ತಾ ಕೆರೆಯ ನಿರ್ಮಾಣವನ್ನೂ ದಾಖಲಿಸಿದೆ.

ವಿಜಯನಗರದ ಅರಸರು : ತುಂಗಭದ್ರಾನದಿ ತೀರದ ಹಂಪೆಯಲ್ಲಿ ಹುಕ್ಕಬುಕ್ಕರೂ ಸೇರಿದಂತೆ ಐವರು ಸಂಗಮ ಸೋದರರು ಸುಮಾರು ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ, ಕರ್ನಾಟಕದ ದಕ್ಷಿಣ ಪ್ರದೇಶದಲ್ಲಿ ಸ್ಥಳೀಯವಾಗಿ ಆಡಳಿತ ನಡೆಸುತ್ತಿದ್ದವರನ್ನು ಸೋಲಿಸಿ ಸಾಮ್ರಾಜ್ಯವನ್ನು ವಿಸ್ತರಿಸಿದರು. ಹೊಯ್ಸಳರ ನಂತರ ಚಂಗಾಳ್ವರ ರಾಜಧಾನಿಯಾಗಿದ್ದ ಹನಸೋಗೆಯ ಪ್ರಗತಿಗೆ ವಿಜಯನಗರ ಅರಸರು ದಾನದತ್ತಿಗಳನ್ನು ನೀಡಿದ್ದಾರೆ.

ಮೇಲೂರಿನಲ್ಲಿ ದೊರೆತಿರುವ ತುಂಡುಶಾಸನ, ವೀರಬುಕ್ಕರಾಯನ ಆಳ್ವಿಕೆಯನ್ನು ತಿಳಿಸುತ್ತದೆ. ಸಂಸ್ಕೃತ-ಕನ್ನಡ ಭಾಷೆಯ ಹೆಬಸೂರು ತಾಮ್ರಶಾಸನ (೧೩೭೭), ಇಮ್ಮಡಿ ಹರಿಹರನು ಹೆಬಸೂರು ಗ್ರಾಮವನ್ನು ತನ್ನ ತಂದೆ ಬುಕ್ಕರಾಯನ ಹೆಸರಿನಿಂದ ಬುಕ್ಕರಾಯಪುರವೆಂಬ ಅಗ್ರಹಾರವನ್ನಾಗಿ ಮಾರ್ಪಡಿಸಿದ್ದನ್ನು ತಿಳಿಸುತ್ತಾ, ತಂದೆ ವೀರ ಬುಕ್ಕರಾಯನಿಗೆ ಶಿವಸಾಯುಜ್ಯ ಪ್ರಾಪ್ತವಾಗಲಿ ಎಂದು ವಿವಿಧ ಬ್ರಾಹ್ಮಣರಿಗೆ ದತ್ತಿ ಬಿಡಲಾಯಿತೆಂದು ಶಾಸನ ಹೇಳಿದೆ. ಅಲ್ಲದೆ, ಒಂದನೆಯ ಬುಕ್ಕರಾಯನು ಮರಣಿಸಿದ ದಿನಾಂಕವನ್ನೂ (೨೪-೨-೧೩೭೭) ದಾಖಲಿಸಿರುವುದು ಉಲ್ಲೇಖಾರ್ಹ. ತಾಲೂಕು ಕೇಂದ್ರ ಕೆ.ಆರ್.ನಗರದ ೧೪೯೧ರ ಶಾಸನ ಇಮ್ಮಡಿ ಹರಿಹರನ ಸುಂಕಾಧಿಕಾರಿ ಕರಿಯ ಮಾಯಣ್ಣನು, ಎಡತೊರೆಯ ಅಂಕನಾಥ ದೇವರಿಗೆ ಎಡತೊರೆಯೂರ ಮಗ್ಗ, ಗಾಣ, ಆಡದೆರೆ, ತೋಟ, ಸುಂಕ ಇತ್ಯಾದಿಗಳನ್ನು ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಮಲ್ಲಿಕಾರ್ಜುನನ ಆಳ್ವಿಕೆಗೆ ಸೇರಿದ ಚಿಕ್ಕ ಹನಸೋಗೆಯ ೧೪೭೨ರ ಶಾಸನ ವೀರಗಲ್ಲಾಗಿದೆ.

ಅರವೀಡು ವಂಶದ ಶ್ರೀರಂಗರಾಯನಿಗೆ ಸೇರಿದ ಗಳಿಗೇಕೆರೆಯ ೧೫೭೭ರ ಶಾಸನ, ಬಯ್ಯಪ್ಪ ನಾಯಕನ ಮೊಮ್ಮಗ, ಕೃಷ್ಣಪ್ಪ ನಾಯಕನ ಮಗ ವೆಂಕಟಪ್ಪನಾಯಕನು ನರಸಿಂಹಪುರ ಸೀಮೆಯ ಹಂಪಾಪುರ ಸ್ಥಳದಲ್ಲಿದ್ದ ಗಳಿಗೆಕೆರೆಯನ್ನು ತನ್ನ ತಾಯಿ ರಾಮಮ್ಮನ ಹೆಸರಿನಿಂದ ರಾಮಪುರ ಅಗ್ರಹಾರ ಎಂದು ಹೆಸರಿಟ್ಟು ವಿಠಲಭಟ್ಟರಿಗೆ ದತ್ತಿ ಬಿಟ್ಟನೆಂದು ಹೇಳಿದೆ. ವೀರರಾಮರಾಯದೇವನ ೧೬೨೮ರ ಸಾಲಿಗ್ರಾಮ ತೆಲುಗು ಶಾಸನ ಲಕ್ಷ್ಮಪ್ಪನಾಯಕನು ಎರಡು ಗ್ರಾಮಗಳನ್ನು ೨೧೨ ವರಾಹಗಳಿಗೆ ಖರೀದಿಸಿ ಎಂಬೆರುಮಾನರ (ರಾಮಾನುಜ) ಗುಡಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಮಾರ್ಚಳ್ಳಿಯ ೧೬೪೩ರ ಶಾಸನ ನಾಲ್ಕನೆಯ ಶ್ರೀರಂಗರಾಯನ ಕಾಲದ್ದಾಗಿದ್ದು, ಮಾರಚನಹಳ್ಳಿಯನ್ನು ೫೦ ವೃತ್ತಿಗಳನ್ನಾಗಿ ವಿಭಜಿಸಿ ಪುರೋಹಿತ ಲಿಂಗಭಟ್ಟರಿಗೆ ಮೈಸೂರರಸ ನರಸಿಂಹರಾಜರು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಮೈಸೂರು ಅರಸರು : ವಿಜಯನಗರ ಸಾಮ್ರಾಜ್ಯದ ಅವನತಿಯೊಂದಿಗೆ ಕೆಳದಿ ಮತ್ತು ಮೈಸೂರು ಅರಸರ ಆಳ್ವಿಕೆ ಪ್ರಬಲಗೊಂಡಿತು. ಯದುರಾಯನು ೧೪೯೯ರಲ್ಲಿ

ಮೈಸೂರರಸರ ಅಧಿಪತ್ಯವನ್ನು ಆರಂಭಿಸಿದನಾದರೂ, ಮೈಸೂರು ಒಡೆಯರ ಕಾಲಕ್ಕೆ ಸೇರಿದಂತೆ ತಾಲೂಕಿನಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಶಾಸನ ಮೇಲೆ ಚರ್ಚಿಸಿರುವ ಮಾರ್ಚಳ್ಳಿ(೧೬೪೩)ಯದಾಗಿದೆ.

ಕ್ರಿ.ಶ. ೧೬೬೬ರ ಭೇರ್ಯ ಶಾಸನದಲ್ಲಿ ಮೈಸೂರು ಅರಸ ದೇವರಾಜವೊಡೆಯರ ಕುಮಾರ, ದೇವರಾಜ ಮಹಿಪಾಲನು ನರಸಿಂಹಪುರಕ್ಕೆ ಸೇರಿದ ಭೇರ್ಯ ಗ್ರಾಮವನ್ನು ದೇವರಾಜಪುರ ಎಂದು ನಾಮಕರಣ ಮಾಡಿ ಅದಕ್ಕೆ ಸೇರಿದ ೧೨ ಉಪಗ್ರಾಮಗಳೊಂದಿಗೆ ಅದನ್ನು ವಿವಿಧ ಬ್ರಾಹ್ಮಣರಿಗೆ ದತ್ತಿಬಿಟ್ಟ ಉಲ್ಲೇಖವಿದೆ.

ಚಿಕ್ಕದೇವರಾಜರ ಕಾಲಕ್ಕೆ ಸೇರಿದ ಮುಂಡೂರಿನ ೧೬೬೭ರ ಶಾಸನ, ಚಾಮರಾಜ ಒಡೆಯರ ಮೊಮ್ಮಗ ಹಾಗೂ ದೇವರಾಜ ಒಡೆಯನ ಮಗನಾದ ದೇವರಾಜ ಮಹಿಪಾಲನನ್ನು ಹೆಸರಿಸುತ್ತದೆ. ಅಲ್ಲದೆ ಮುಂಡೂರನ್ನು ಅಗ್ರಹಾರವನ್ನಾಗಿಸಿ ದೇವರಾಜಪುರ ಎಂದು ಹೆಸರಿಟ್ಟು ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಇಮ್ಮಡಿ ಕೃಷ್ಣರಾಜರ ಕಾಲಕ್ಕೆ ಸೇರಿದ ತಾಮ್ರಶಾಸನ, ಕೃಷ್ಣರಾಜರ ದಳವಾಯಿ ದೇವರಾಜ ಹಾಗೂ ನಂಜರಾಜ (ಕಳಲೆ ಸೋದರರು)ರನ್ನು ಹೆಸರಿಸುತ್ತಾ ಕನ್ನಂಬಾಡಿ ಪರಿಸರದ ೨೬ ಉಪಗ್ರಾಮಗಳನ್ನು ಸೇರಿಸಿ ನಂಜರಾಜಸಮುದ್ರ ಎಂಬ ಅಗ್ರಹಾರ ನಿರ್ಮಿಸಿ ಬ್ರಾಹ್ಮಣರಿಗೆ ದತ್ತಿಬಿಟ್ಟಿದ್ದನ್ನು ದಾಖಲಿಸುತ್ತದೆ. ಇದೇ ಅರಸನಿಗೆ ಸೇರಿದ ೧೭೬೧ರ ಹನಸೋಗೆಯ ಎರಡು ತಾಮ್ರಶಾಸನಗಳು ಕೃಷ್ಣರಾಜಸಮುದ್ರ ಹಾಗೂ ದೇವಾಂಬಸಮುದ್ರ ಎಂಬ ಅಗ್ರಹಾರಗಳನ್ನು ನಿರ್ಮಿಸಿ ವಿವಿಧ ಗೋತ್ರದ ಬ್ರಾಹ್ಮಣರಿಗೆ ದತ್ತಿಬಿಟ್ಟಿದ್ದನ್ನು ದಾಖಲಿಸಿವೆ. ಮೈಸೂರು ಅರಸರ ಕಾಲದಲ್ಲಿ ತಾಲ್ಲೂಕಿನ ಚುಂಚನಕಟ್ಟೆ, ಸಾಲಿಗ್ರಾಮ ಸೇರಿದಂತೆ ಅನೇಕ ಸ್ಥಳಗಳಲ್ಲಿದ್ದ ದೇವಾಲಯಗಳು ಜೀರ್ಣೋದ್ಧಾರಗೊಂಡಿದ್ದು, ದಾನದತ್ತಿ ನೀಡಲಾಗಿದೆ. ಮುಮ್ಮಡಿ ಕೃಷ್ಣರಾಜರು ಸಾಲಿಗ್ರಾಮದ ಕೃಷ್ಣಸ್ವಾಮಿ ಗುಡಿಗೆ ಸತ್ಯಭಾಮ ವಿಗ್ರಹವನ್ನು ದತ್ತಿ ನೀಡಿದ್ದಾರೆ.

ಸಂಸ್ಥಾನದಲ್ಲಿ ಹೈದರ್–ಟಿಪ್ಪು ಜೀವಿತ ಕಾಲದಲ್ಲಿ ಎಡತೊರೆ ಕೂಡ ಅವರ ವಶವಾಯಿತು. ಆನಂತರ ಮತ್ತೆ ಅಧಿಕಾರಕ್ಕೆ ಬಂದ ಮೈಸೂರರಸರಾದ ಚಾಮರಾಜ ಒಡೆಯರ ಕಾಲದ ೧೮೧೩ರ ಶಾಸನ, ಮಳಲಿ ಗ್ರಾಮವನ್ನು ಅಗ್ರಹಾರವನ್ನಾಗಿಸಿ, ಶಿವಭಕ್ತ ಬಸವಲಿಂಗದೇವರಿಗೆ ಶಾಂತಾಪುರವನ್ನು ದತ್ತಿಬಿಟ್ಟಿದ್ದನ್ನು ದಾಖಲಿಸಿದೆ.

ಕೃಷ್ಣರಾಜನಗರ ಯೋಜನೆಯ ರೂವಾರಿ ಕ್ರುಂಬ್ಲಿಗಲ್ : ಮೈಸೂರು ಸಂಸ್ಥಾನದ ಎಡತೊರೆ, ತಾಲ್ಲೂಕಿನ ಕೇಂದ್ರ ಸ್ಥಳ, ಕೃಷ್ಣರಾಜಸಾಗರದ ನಿರ್ಮಾಣದ ಹಿನ್ನೆಲೆಯಲ್ಲಿ ಅದು ಜಲಾವೃತ್ತಗೊಂಡಾಗ ಹೊಸ ಊರು ನಿರ್ಮಾಣಗೊಂಡು ಅದಕ್ಕೆ ಕೃಷ್ಣರಾಜನಗರ ಎಂದು ನಾಮಕರಣ ಮಾಡಲಾಯಿತು. ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನದ ರೂವಾರಿ ಕ್ರುಂಬ್ಲಿಗಲ್ ಕೃಷ್ಣರಾಜನಗರದ ಯೋಜನೆಯನ್ನೂ ಸಿದ್ಧ ಮಾಡಿದವರು. ಈ ಪಟ್ಟಣದ ಯೋಜನೆಯಲ್ಲಿ ಅಂದಿನ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಹಾಗೂ ಮೈಸೂರು ಅರಸರು ವಿಶೇಷ ಆಸಕ್ತಿ ಹೊಂದಿದ್ದರು.

ಸ್ವಾತಂತ್ರ್ಯ ಸಂಗ್ರಾಮ : ಭಾರತಕ್ಕೆ ವ್ಯಾಪಾರ ಮಾಡುವ ಆಶಯದೊಂದಿಗೆ ಬಂದ ಆಂಗ್ಲರು ಪರಿಸ್ಥಿತಿಯ ಲಾಭಪಡೆದು ಇಡೀ ದೇಶವನ್ನು ತಮ್ಮ ಆಡಳಿತಕ್ಕೆ ತೆಗೆದುಕೊಂಡರು. ಭಾರತೀಯ ನೆಲದಲ್ಲಿ ಭಾರತಿಯರೇ ಎರಡನೆಯ ದರ್ಜೆ ಪ್ರಜೆಗಳಾದರು. ಭಾರತೀಯರ ಮೇಲೆ ದಬ್ಬಾಳಿಕೆ ದೌರ್ಜನ್ಯ ನಡೆಸುತ್ತಿದ್ದುದರಿಂದ ರೊಚ್ಚಿಗೆದ್ದ ಭಾರತೀಯರು ಸ್ವಾತಂತ್ರ್ಯ ಪಡೆಯುವ ಹಂಬಲದಿಂದ ಸ್ವಾತಂತ್ರ ಚಳವಳಿ ಆರಂಭಿಸಿದರು.

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಪ್ರಾಣ ತ್ಯಾಗ ಮಾಡಿದವರು ತಾಲ್ಲೂಕಿನಲ್ಲಿದ್ದಾರೆ. ಅಲ್ಲದೆ ಸ್ವಾತಂತ್ರ್ಯ ಚಳವಳಿ ಮುಗಿದು ಭಾಷಾವಾರು ಪ್ರಾಂತ ವಿಂಗಡಣೆಯಲ್ಲಿ ಕನ್ನಡದ ಜನರನ್ನು ಒಂದಾಗಿಸಬೇಕೆಂದು ಏಕೀಕರಣ ಹೋರಾಟದಲ್ಲೂ ಭಾಗವಹಿಸಿದ ಚಳವಳಿಗಾರರೂ ಇದ್ದಾರೆ.

ಸ್ವಾತಂತ್ರ ಚಳವಳಿಯಲ್ಲಿ ಆರ್.ಬಿ. ಪುಟ್ಟಬಸಪ್ಪ, ಸಾಲಿಗ್ರಾಮದ ಗಣಪತಿ ಶಾಸ್ತ್ರಿ, ಎಸ್. ಚನ್ನಮಲ್ಲಶೆಟ್ಟಿ, ವೈ.ವಿ. ಅನಂತಯ್ಯ, ವೈ.ಎಸ್. ಅಶ್ವತನಾರಾಯಣಶೆಟ್ಟಿ, ಸೋನೋಜಿರಾವ್, ವೈ.ಜಿ. ನಂಜುಂಡಪ್ಪ (ತಿಮ್ಮಶೆಟ್ಟಿ) ಮುಂತಾದವರು, ಎಂ.ಎನ್. ಜೋಯಿಷ್, ಟಿ.ಎಸ್. ಸುಬ್ಬಣ್ಣನವರ ಮಾರ್ಗದರ್ಶನದಲ್ಲಿ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ೧೯೨೭ರಲ್ಲಿ ಬೆಂಗಳೂರಿಗೆ ಬಂದಿದ್ದ ಮಹಾತ್ಮ ಗಾಂಧೀಜಿಯವರು ೧೯೨೭ರ ಜುಲೈ ೨೩ರಂದು ಕೆ.ಆರ್.ನಗರಕ್ಕೂ ಭೇಟಿ ನೀಡಿದ್ದು, ಭಾಷಣ ನೀಡಿದ್ದಾರೆ.

ತಾಲ್ಲೂಕಿನ ವಿದ್ಯಾರ್ಥಿ ಸಮುದಾಯದಲ್ಲಿ ಚಳವಳಿಗೆ ಸ್ಫೂರ್ತಿ ನೀಡಿದ ಕೋಳೂರು ಶಂಕರಪ್ಪ ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪೋಲೀಸರ ಲಾಟಿ ಏಟಿನಿಂದ ಜೈಲಿನಲ್ಲೇ ಹುತಾತ್ಮರಾದರು. ಹನಸೋಗೆ ಸಮೀಪದ ಕೋಳೂರು ಎಂಬ ಪುಟ್ಟ ಹಳ್ಳಿಯ ಪಟೇಲ ಚೆನ್ನಪ್ಪ ಮತ್ತು ಕೆಂಪಮ್ಮನವರ ಮಗ. ಶಂಕರಪ್ಪ ಮೈಸೂರಿನ ಮರಿಮಲ್ಲಪ್ಪ ಶಾಲೆಯಲ್ಲಿ ಓದುತ್ತಿದ್ದವರು. ಕೃಷ್ಣರಾಜನಗರ ತಾಲ್ಲೂಕಿನ ಗ್ರಾಮಗಳಲ್ಲಿ ಸ್ನೇಹಿತರೊಡನೆ ಸೇರಿ ಸ್ವಾತಂತ್ರ್ಯದ ಬಗೆಗೆ ಜನರಲ್ಲಿ ಅರಿವು ಮೂಡಿಸಿದ್ದವರು.

ಇವರಲ್ಲದೆ ವೈ.ಎನ್. ನಂಜುಂಡಪ್ಪ, ಆರ್.ಬಿ. ಶಿವಪ್ಪ, ಬಾಗಿವಾಳು ಮಲ್ಲಪ್ಪ, ಬಿ.ಎಸ್. ಮಾದಪ್ಪ, ಎ.ಎಸ್. ಸಿದ್ಧಲಿಂಗಪ್ಪ, ಕೆ.ಎಸ್. ಕೋಳಪ್ಪ, ಡಾ. ಎಚ್.ಎಲ್. ತಿಮ್ಮೇಗೌಡ, ಹೊಸ ಅಗ್ರಹಾರ ಲಿಂಗರಾಜು, ಸಾಲಿಗ್ರಾಮದ ಎಸ್.ಬಿ. ಜವರೇಗೌಡ, ಮೂಡಲಬೀಡು ಮುದಿಗೌಡ, ಎಂ.ಬಿ. ತಮ್ಮಯ್ಯ, ಹಳೆಯೂರು ಹಾಲೇಗೌಡ, ದೊಡ್ಡಕೊಪ್ಪಲು ಹಲಗೇಗೌಡ, ರಜತಾದ್ರಿ ಮುಂತಾದವರು ಪಾಲ್ಗೊಂಡಿದ್ದಾರೆ.

೧೯೪೭ರಲ್ಲಿ ಸ್ವಾತಂತ್ರ್ಯ ದೊರೆತರೂ ಒಕ್ಕೂಟಕ್ಕೆ ಸೇರಲು ಮೈಸೂರು ಅರಸರು ತಕ್ಷಣ ಒಪ್ಪಲಿಲ್ಲ. ಅದಕ್ಕಾಗಿ ನಡೆದ "ಮೈಸೂರು (ಅರಮನೆ) ಚಲೋ" ಚಳವಳಿಯಲ್ಲಿ ತಾಲೂಕಿನಿಂದ ಅನೇಕ ಯುವಕರು ಭಾಗವಹಿಸಿದ್ದು, ಸೆರೆವಾಸ ಅನುಭವಿಸಿದವರಲ್ಲಿ ಎ.ಸಿ. ಪುಟ್ಟಣ್ಣಯ್ಯ, ವಿ. ಲಕ್ಕಯ್ಯ, ಟಿ. ಪುಟ್ಟಣ್ಣ, ಆರ್.ಬಿ. ಗುರುಕಾರ್, ವೈ.ಎ. ಸುಬ್ಬಯ್ಯಶೆಟ್ಟಿ , ಎಂ.ಆರ್. ಆನಂದರಾಮರಾವ್, ವೈ.ಎಸ್. ರಾಮನಾಥಶೆಟ್ಟಿ,

ಜಿ.ಎ. ವಾಹಿದ್‌ಖಾನ್, ಕೆ.ಆರ್. ನೀಲಕಂಠಯ್ಯ, ವೈ.ಎ. ತಮ್ಮಯ್ಯ, ಆರ್.ಬಿ. ತೋಟಪ್ಪ, ವೈ.ಎಸ್. ಸತ್ಯಮೂರ್ತಿ, ಎಂ.ಎನ್. ನಂಜಪ್ಪ, ಕೆ.ಟಿ. ರುಕ್ಮಾಂಗದ, ಆರ್.ಬಿ. ಸೋಮಪ್ಪ, ಸಿ.ಎ. ಕರೀಗೌಡ, ವೈ.ಸಿ. ರೇವಣ್ಣ, ಎಸ್. ವಿರೂಪಾಕ್ಷ ಮುಂತಾದವರಿದ್ದಾರೆ.

ಏಕೀಕರಣ ಚಳವಳಿ : ಈ ಚಳುವಳಿಯಲ್ಲಿ ತಾಲೂಕಿನಿಂದ ನೇರವಾಗಿ ಭಾಗವಹಿಸಿದವರು ಕಡಿಮೆ. ಕರ್ನಾಟಕ ಏಕೀಕರಣ ಚಳವಳಿಯ ಸಂದರ್ಭದಲ್ಲಿ ತಾಲೂಕಿನ ಕನ್ನಡ ಯುವಕ ಸಂಘ, ಕಲಾಸಂಘಗಳು ನಾಡಿನ ಹಿರಿಯ ಸಾಹಿತಿಗಳಾದ ಡಾ॥ ದ.ರಾ. ಬೇಂದ್ರೆ, ಡಾ॥ ಶಿವಮೂರ್ತಿಶಾಸ್ತ್ರಿ, ಡಾ॥ ಕೆ. ಶಿವರಾಮ ಕಾರಂತರು ಸೇರಿದಂತೆ ಹಲವಾರು ಸಾಹಿತಿಗಳು ಕಲಾವಿದರನ್ನು ಆಹ್ವಾನಿಸಿ, ಏಕೀಕರಣದ ಮಹತ್ವವನ್ನು ಸಾರುವ ಭಾಷಣಗಳನ್ನು ಅವರಿಂದ ಮಾಡಿಸುವ ಮೂಲಕ ಜನರಲ್ಲಿ ಅರಿವು ಮೂಡಿಸಲು ಶ್ರಮಿಸಿದ್ದಾರೆ. ಏಕೀಕರಣದ ರೂವಾರಿ ಸಿದ್ಧವನಹಳ್ಳಿ ನಿಜಲಿಂಗಪ್ಪನವರು ೧೯೫೬ರ ಅಕ್ಟೋಬರ್‌ನಲ್ಲಿ ಕೆ.ಆರ್.ನಗರದ ಕನ್ನಡ ಯುವಕ ಸಂಘದ ಸಮಾರಂಭಕ್ಕೆ ಬಂದಿದ್ದಾರೆ.

ತಾಲೂಕಿನ ಆರ್.ಬಿ. ಸೋಮಪ್ಪ, ವೈ.ಆರ್. ಭದ್ರಪ್ಪ, ದೂಲಿ ಸತ್ಯನಾರಾಯಣ, ರಾಮಕೃಷ್ಣ ಸೋಮಯಾಜಿ ಮುಂತಾದವರು ಏಕೀಕರಣ ಚಳುವಳಿಯಲ್ಲಿ ತೊಡಗಿಸಿಕೊಂಡ ಪ್ರಮುಖರು. ಈ ಚಳುವಳಿಯಿಂದಾಗಿ ೧೯೫೬ರ ನವೆಂಬರ್ ೧ರಂದು ಏಕೀಕೃತ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಆ ನಂತರ ೧೯೭೩ರ ನವೆಂಬರ್ ಒಂದರಂದು ರಾಜ್ಯಕ್ಕೆ ಕರ್ನಾಟಕ ಎಂದು ಪುನರ್ ನಾಮಕರಣ ಹೊಂದಿತು.

ಚುನಾವಣೆ : ಅಂದಿನ ಮೈಸೂರು ಸಂಸ್ಥಾನದಲ್ಲಿ ೧೮೮೧ರಲ್ಲಿ ಆರಂಭಗೊಂಡ ಪ್ರಜಾಪ್ರತಿನಿಧಿ ಸಭೆ, ಪ್ರಜಾಪ್ರಭುತ್ವದ ಆಡಳಿತಕ್ಕೆ ಮೊದಲ ಮೆಟ್ಟಿಲಾಗಿತ್ತು. ಆರಂಭದಲ್ಲಿ ನಾಮಕರಣ ಮೂಲಕ ಗಣ್ಯರನ್ನು ಒಂದು ವರ್ಷಕ್ಕೆ ಆಯ್ಕೆ ಮಾಡಲಾಗುತ್ತಿದ್ದು, ವರ್ಷದಲೊಮ್ಮೆ ಪ್ರಜಾಪ್ರತಿನಿಧಿ ಸಭೆ ಸಮಾವೇಶಗೊಳ್ಳುತ್ತಿತ್ತು. ಮುಂದೆ ಕೃಷಿ ಕಂದಾಯ, ಮನೆಗಂದಾಯ ಮೊತ್ತವನ್ನು ಅಳತೆಗೋಲಾಗಿಟ್ಟುಕೊಂಡು ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡುವ ಸೀಮಿತ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂತು. ಪದವೀಧರರಿಗೆ ಹಾಗೂ ಮಹಿಳೆಯರಿಗೂ ಮತದಾನದ ಹಕ್ಕನ್ನು ನೀಡಲಾಯಿತು. ಚುನಾವಣೆಯಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಲಾಯಿತು. ಮುಂದೆ ಪ್ರಜಾಪ್ರತಿನಿಧಿ ಸಭಾ ಸದಸ್ಯರ ಕಾಲಾವಧಿಯನ್ನು ನಾಲ್ಕು ವರ್ಷಗಳಿಗೂ, ಮತದಾನಕ್ಕೆ ೨೧ ವರ್ಷಗಳ ಕನಿಷ್ಠ ಮಿತಿಯನ್ನು ಜಾರಿಗೊಳಿಸಲಾಯಿತು. ಅದರಂತೆ ೧೮೮೧ರಿಂದ ೧೯೪೯ರವರೆಗೆ ತಾಲೂಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿದ ಸದಸ್ಯರ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. ಹಂಪಾಪುರದ ಅಣ್ಣಾಜಿಯಂಗಾರ್ (೧೮೮೧–೮೬, ೯೧–೯೨, ೯೪–೯೬) ಲ.ಕೃಷ್ಣರಾವ್ (೧೮೮೯–೯೦, ೯೨–೯೯; ೧೯೦೩–೦೭), ನಂಜಣ್ಣ ೧೮೮೬,೮೯), ಸುಬ್ಬಣ್ಣ (೧೮೮೮–೮೯, ೯೪,೯೫,೧೯೦೪) ಸಂಗಪ್ಪ (೧೮೮೯,೯೧), ಶಿವಾಜಿರಾವ್ ಎಂ.ಡಿ (೧೮೮೯–೯೩,೯೭,೧೯೦೧) ಲಕ್ಕೇಗೌಡ (೧೮೯೦,೯೩,೯೯,೯೦), ಮಿರ್ಲೆ ರಾಮೇಗೌಡ (೧೮೮೧) ಕಪನಿಪತಯ್ಯ (೧೮೯೨)

ಮಿರ್ಲೆ ಸುಬ್ಬರಾವ್ (೧೮೯೭), ಕೋಟೆ ಕೃಷ್ಣಯ್ಯ (೧೮೯೨-೯೩), ಇಬ್ಬಲಸೆಟ್ಟಿ(೧೮೯೭-೯೯) ವೈ.ಸುಬ್ಬರಾವ್ (೧೯೦೬-೦೭) ದ್ಯಾವರಸಗೌಡ (೧೯೦೦) ಅಂಬಲೆ ಅಣ್ಣಯ್ಯ ಪಂಡಿತ (೧೯೦೯-೧೧) ಕೃಷ್ಣಪ್ಪ (೧೯೦೯-೧೦), ಬೋರೆಗೌಡ(೧೯೧೨-೨೭) ಪಟೇಲ ಚನ್ನಪ್ಪ (೧೯೧೫-೨೬) ಚಂದಗಾಲು ಅಪ್ಪಾಜಯ್ಯ (೧೯೨೨-೨೩) ದೇವೋಜಿರಾವ್ (೧೯೦೯-೧೧) ಹಿರಣ್ಯಪ್ಪ (೧೯೧೨-೧೪) ಕಾಳೇಗೌಡ (೧೯೧೨-೧೪) (೧೯೨೧-೨೩) ರಾಮಸ್ವಾಮಿ ಶಾಸ್ತ್ರಿ (೧೯೧೫-೨೧), ವೆಂಕಟಚಲಯ್ಯಂಗಾರ್ (೧೯೧೨-೧೪) ಬಳೆಸಿದ್ದಲಿಂಗಶೆಟ್ಟಿ(೧೯೨೪-೩೩, ೧೯೩೩-೪೪) ಸುಬ್ಬರಾವ್ ಟಿ.ಎನ್ (೧೯೨೭-೨೯), ಬೆಳ್ಳುಳ್ಳಿ ಚನ್ನಪ್ಪ (೧೯೩೦-೩೧), ವೈ.ವಿ.ಗುಂಡೂರಾವ್ (೧೯೩೪-೩೬), ಆರ್.ಬಿ.ಪುಟ್ಟಬಸಪ್ಪ (೧೯೩೭-೪೪) ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ವೈ. ಎನ್. ನಂಜುಂಡಪ್ಪ ಮುಂತಾದವರು ಸೇವೆ ಸಲ್ಲಿಸಿದ್ದಾರೆ. ೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸಾಲಿಗ್ರಾಮದ ಎಸ್. ಎ ತಮ್ಮಯ್ಯ ವಿಧಾನಸಭೆಗೆ ಆಯ್ಕೆಯಾದರು. ೧೯೫೭ರಲ್ಲಿ ಎಚ್. ಎಂ. ಚನ್ನಬಸಪ್ಪ, ೧೯೬೨ ಡಾ॥ ಕೆ. ಎಸ್. ಗೌಡಯ್ಯ, ೧೯೬೭ ಗಂಧನಹಳ್ಳಿ ಬಸವರಾಜು, ೧೯೭೨ ಎಚ್. ಬಿ. ಕೆಂಚೇಗೌಡ, ೧೯೭೮ ಎಚ್. ವಿಶ್ವನಾಥ, ೧೯೮೩, ೧೯೮೫ ಎಸ್. ನಂಜಪ್ಪ, ೧೯೮೯ ಎಚ್. ವಿಶ್ವನಾಥ, ೧೯೯೪ ಎಸ್. ನಂಜಪ್ಪ, ೧೯೯೯ ಎಚ್. ವಿಶ್ವನಾಥ ೨೦೦೪ ಮಂಚನಹಳ್ಳಿ ಮಹದೇವ, ವಿಧಾನಸಭಾ ಸದಸ್ಯರಾಗಿದ್ದಾರೆ.

ಎಚ್.ಎಂ. ಚನ್ನಬಸಪ್ಪ ರಾಜ್ಯದ ನೀರಾವರಿ ಸಚಿವರಾಗಿ ದಕ್ಷತೆ, ಪ್ರಾಮಾಣಿಕತೆಯಿಂದ ಸೇವೆ ಮಾಡಿದವರು, ಮೂಲತಃ ಪಿರಿಯಾಪಟ್ಟಣ ತಾಲ್ಲೂಕು ಹರಳಹಳ್ಳಿ ಗ್ರಾಮದವರು.ಎಸ್. ನಂಜಪ್ಪ ರಾಜ್ಯದ ಆಹಾರ ಮತ್ತು ನಾಗರೀಕ ಖಾತೆ ಸಚಿವರಾಗಿ ಸೇವೆ ಮಾಡಿದ್ದಾರೆ. ಎಚ್. ವಿಶ್ವನಾಥ, ಕನ್ನಡ ಸಂಸ್ಕೃತಿ, ಅರಣ್ಯ, ಶಿಕ್ಷಣ ಸಚಿವರಾಗಿ ಸೇವೆ ಮಾಡಿರುವ ಕ್ರಿಯಾಶೀಲ ರಾಜಕಾರಣಿ. ೧೯೮೧ರಲ್ಲಿ ಗಂಧನಹಳ್ಳಿ ಬಸವರಾಜು ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆ ಯಾಗಿ ಸೇವೆ ಮಾಡಿದ್ದಾರೆ.ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿ ಟಿ.ಕೆ. ಚಿನ್ನಸ್ವಾಮಿ ಹಾಗೂ ಕೆ.ಪಿ. ಪುಟ್ಟಸಿದ್ಧಶೆಟ್ಟಿ ಒಂದೊಂದು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ತೋಂಟದಾರ್ಯ ವಿಧಾನ ಪರಿಷತ್ತು ಸದಸ್ಯರಾಗಿದ್ದಾರೆ. ೨೦೦೭ರ ಚುನಾವಣಾ ತಿದ್ದುಪಡಿ ಕಾಯ್ದೆಯನ್ವಯ ಆವರೆವಿಗೂ ಮೈಸೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೊಳಪಟ್ಟಿದ್ದ ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರವನ್ನು ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿಸಲಾಗಿದೆ. ೧೯೫೨ರಿಂದ ೨೦೦೯ರವರೆಗೆ ತಾಲೂಕನ್ನು ಪ್ರತಿನಿಧಿಸಿರುವ ಲೋಕಸಭಾ ಸದಸ್ಯರು ಹಾಗೂ ತಾಲೂಕಿನಿಂದ ಆಯ್ಕೆಯಾದ ಲೋಕಸಭಾ ಹಾಗೂ ವಿಧಾನ ಸಭಾ ಸದಸ್ಯರ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ.

ಮೈಸೂರು ಲೋಕಸಭಾಕ್ಷೇತ್ರದ ಚುನಾವಣಾ ಫಲಿತಾಂಶ (೧೯೫೨–೨೦೦೯)

ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು		ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ	ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ
೧		೨	೩
೧೯೫೨	ದ್ವಿ ಸದಸ್ಯ ಕ್ಷೇತ್ರ	೧) ಎನ್.ರಾಚಯ್ಯ (ಭಾರಾಕಾಂ) ೨,೦೯,೨೦೩ (೨೯.೩೭)	ಕ.ಮ.ಪ್ರ.ಪಾ., ೧,೪೨,೩೬೩ (೧೯.೯೯)
		೨) ಎಂ.ಎಸ್.ಗುರುಪಾದಸ್ವಾಮಿ (ಕೆಎಂಪಿಪಿ)೧,೯೬,೧೭೫ (೨೭.೫೪)	ಭಾ.ರಾ.ಕಾಂ., ೧,೬೪,೫೭೭ (೨೩.೧೦)
೧೯೫೭	ದ್ವಿಸದಸ್ಯ ಕ್ಷೇತ್ರ	೧) ಎನ್.ಶಂಕರಯ್ಯ (ಭಾರಾಕಾಂ) ೨,೩೯,೫೭೨ (೩೧.೭೧)	ಪ್ರ.ಸ.ಪ., ೧,೮೪,೩೭೦ (೨೪.೪೦)
		೨) ಎಸ್.ಎಂ.ಸಿದ್ಧಯ್ಯ (ಭಾರಾಕಾಂ) ೧,೮೬,೧೯೫ (೨೪–೬೫)	ಪ್ರ.ಸ.ಪ., ೧,೪೫,೩೨೩ (೧೯.೨೪)
೧೯೬೨	ಮೈಸೂರು*	ಎಂ.ಶಂಕರಯ್ಯ (ಭಾರಾಕಾಂ) ೯೭,೪೮೯ (೪,೨೮೫)	ಸ್ವ.ಪ., ೪೦,೦೪೩ (೧೭.೫೨)
೧೯೬೭	ಮೈಸೂರು	ಎಚ್.ಡಿ.ತುಳಸಿದಾಸ್ (ಭಾರಕಾಂ) ೧,೦೮,೮೫೫ (೪೦.೦೯)	ಪಕ್ಷೇತರ, ೯೩,೫೬೬ (೩೪.೪೬)
೧೯೭೧	ಮೈಸೂರು	ಎಚ್.ಡಿ.ತುಳಸಿದಾಸ್ ರಾ.ಕಾಂ (ಜೆ) ೨,೧೩,೭೨೪ (೭೪.೪೧)	ರಾ.ಕಾಂ.(ಎನ್), ೯೬,೨೭೨ (೩೫.೩೧)
೧೯೭೭	ಮೈಸೂರು	ಎಚ್.ಡಿ.ತುಳಸಿದಾಸ್ (ಕಾಂಗ್ರೆ) ೧,೯೫,೬೫೭ (೫೩.೬೮)	ಭಾ.ಮೋ.ದ., ೧,೫೩,೪೮೯ (೪೨.೨೫)
೧೯೮೦	ಮೈಸೂರು	ಎಂ.ರಾಜಶೇಖರ ಮೂರ್ತಿ (ಕಾಂಗ್ರೆ) ೧,೯೫,೭೨೪ (೪೯.೪೭)	ಭಾ.ಪಾ.ಕಾಂ.(ಅರಸು), ೧,೧೨,೬೮೮ (೨೮.೪೮)
೧೯೮೪	ಮೈಸೂರು	ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೨,೪೭,೭೫೪ (೫೪.೭೦)	ಪಕ್ಷೇತರ, ೧,೮೩,೧೪೪ (೪೦.೩೩)
೧೯೮೯	ಮೈಸೂರು	ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೩,೮೪,೮೮೮ (೫೫.೬)	ಜ.ಪ.(ಜೆ.ಪಿ), ೧,೩೫,೫೨೪ (೧೯.೬)

೧		೨	೩
೧೯೯೧	ಮೈಸೂರು	ಶ್ರೀಮತಿ ಚಂದ್ರಪ್ರಭಾ ಅರಸು (ಕಾಂಗ್ರೆ) ೨,೨೫,೮೮೧ (೩೦.೪೭)	ಭಾ.ಜ.ಪ., ೨,೦೮,೯೯೯ (೩೬.೫೨)
೧೯೯೬	ಮೈಸೂರು	ಶ್ರೀಕಂಠದತ್ತ ನರಸಿಂಹರಾಜ ಒಡೆಯರು ೨,೫೮,೨೯೯ (೩೪.೮೨)	ಜ.ದ., ೨,೪೬,೬೩೨ (೩೩.೨೫)
೧೯೯೮**	ಮೈಸೂರು	ಸಿ.ಎಚ್.ವಿಜಯಶಂಕರ್ (ಭಾಜಪ) ೩,೫೫,೮೪೬ (೪೨.೧೦)	ಭಾ.ರಾ.ಕಾಂ., ೨,೫೨,೮೨೨ (೨೯.೯೧)
೧೯೯೯	ಮೈಸೂರು	ಶ್ರೀಕಂಠದತ್ತ ನರಸಿಂಹರಾಜ ಒಡೆಯರು (ಕಾಂಗ್ರೆ) ೩,೩೮,೦೫೧ (೩೮)	ಭಾ.ಜ.ಪ., ೩,೨೪,೬೨೦ (೩೬)
೨೦೦೪	ಮೈಸೂರು	ಸಿ.ಎಚ್.ವಿಜಯಶಂಕರ್ (ಭಾಜಪ) ೩,೧೬,೪೪೨ (೩೩.೦೬)	ಜ.ದ.(ಜಾ), ೩,೦೬೨೯೨ (೩೨)
೨೦೦೯#	ಮಂಡ್ಯ	ಎನ್.ಚೆಲುವರಾಯಸ್ವಾಮಿ ಜ.ದ.(ಜಾ) ೩,೮೪,೪೪೩	ಭಾ.ರಾ.ಕಾಂ., ೩,೬೦,೯೪೩

* ಮೈಸೂರು ಜಿಲ್ಲೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ರೂಪಿಸಲಾಯಿತು.

** ಮೈಸೂರು ಜಿಲ್ಲೆಯು ವಿಭಜಿಸಲ್ಪಟ್ಟು (೧೯೯೭) ಚಾಮರಾಜನಗರ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು.

* ಮೈಸೂರು ಲೋಕಸಭಾ ಕ್ಷೇತ್ರವು ಮೈಸೂರು ತಾಲೂಕಿನ ನಾಲ್ಕು (ಕೃಷ್ಣರಾಜ, ನರಸಿಂಹರಾಜ, ಚಾಮುಂಡೇಶ್ವರಿ ಹಾಗೂ ಚಾಮರಾಜ), ಹೆಗಡೆದೇವನಕೋಟೆ, ಹುಣಸೂರು, ಕೃಷ್ಣರಾಜನಗರ ಹಾಗೂ ಪಿರಿಯಾಪಟ್ಟಣ, ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

\# ೨೦೦೭ರ ಚುನಾವಣಾ ತಿದ್ದುಪಡಿ ಕಾಯ್ದೆಯನ್ವಯ ಆವರೆವಿಗೂ ಮೈಸೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೊಳಪಟ್ಟಿದ್ದ ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರವನ್ನು ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿಸಲಾಗಿದೆ.

ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ (೧೯೫೨–೨೦೦೮)

ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು		ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ	ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ
೧೯೫೨	ಕೃಷ್ಣರಾಜನಗರ	ಎಸ್.ಎಚ್.ತಿಮ್ಮಯ್ಯ (ಪಕ್ಷೇತರ) ೭,೮೨೦ (೩೪,೯೫)	ಭಾ.ರಾ.ಕಾಂ ೬೦,೫೬ (೨೧.೦೭)
೧೯೫೭	ಕೃಷ್ಣರಾಜನಗರ	ಎಚ್.ಎಂ.ಚನ್ನಬಸಪ್ಪ (ಭಾ.ರಾ.ಕಾಂ) ೧೮,೬೧೫(೫೪.೯೩)	ಪಕ್ಷೇತರ, ೧೨,೬೪೯ (೩೭.೩೬)
೧೯೬೨	ಕೃಷ್ಣರಾಜನಗರ	ಕೆ.ಎಸ್.ಗೌಡಯ್ಯ (ಪಕ್ಷೇತರ) ೨೦,೯೭೬ (೫೩.೦೬)	ಭಾ.ರಾ.ಕಾಂ ೧೮,೫೫೭ (೪೬,೯೪)
೧೯೬೭	ಕೃಷ್ಣರಾಜನಗರ	ಎಂ.ಬಸವರಾಜು (ಪಕ್ಷೇತರ) ೧೦,೪೧೮(೨೯.೬೬)	ಭಾ.ರಾ.ಕಾಂ ೬,೯೮೩ (೧೯.೮೮)
೧೯೭೨	ಕೃಷ್ಣರಾಜನಗರ	ಎಚ್.ಬಿ.ಕೆಂಚೇಗೌಡ (ಭಾ.ರಾ.ಕಾಂ) ೧೫,೬೦೪(೨೭.೮೭)	ರಾ.ಕಾಂ(ಒ) ೧೦,೫೨೬ (೨೫.೫೫)
೧೯೭೮	ಕೃಷ್ಣರಾಜನಗರ	ಎಚ್.ವಿಶ್ವನಾಥ್ (ಕಾಂಗ್ರೈ) ೩೩,೫೭೧(೫೪.೮೯)	ಜನತಾಪಕ್ಷ ೨೪,೪೪೧ (೩೯.೯೭)
೧೯೮೩	ಕೃಷ್ಣರಾಜನಗರ	ಎಸ್.ನಂಜಪ್ಪ (ಜನತಾಪಕ್ಷ) ೩೫,೮೯೬ (೫೪.೩೯)	ಭಾ.ರಾ.ಕಾಂ ೨೮,೫೪೬ (೪೩.೨೬)
೧೯೮೫	ಕೃಷ್ಣರಾಜನಗರ	ಎಸ್.ನಂಜಪ್ಪ (ಜನತಾಪಕ್ಷ) ೩೩,೧೭೦ (೫೦.೫೨)	ಭಾ.ರಾ.ಕಾಂ ೩೦,೩೬೬ (೪೬.೨೫)
೧೯೮೯	ಕೃಷ್ಣರಾಜನಗರ	ಎಚ್.ವಿಶ್ವನಾಥ್ (ಭಾ.ರಾ.ಕಾಂ) ೬೧,೫೪೯ (೬೫.೮೮)	ಜ.ಪ ೨೬,೪೬೭ (೨೮.೩೫)
೧೯೯೪	ಕೃಷ್ಣರಾಜನಗರ	ಎಚ್.ನಂಜಪ್ಪ (ಜನತಾದಳ) ೫೧,೦೧೪ (೪೮.೧೩)	ಭಾ.ರಾ.ಕಾಂ ೪೯,೭೦೭ (೪೬,೮೯)
೧೯೯೯	ಕೃಷ್ಣರಾಜನಗರ	ಎಚ್.ವಿಶ್ವನಾಥ್ (ಭಾ.ರಾ.ಕಾಂ) ೫೮,೧೬೧ (೫೪)	ಜನತಾದಳ (ಜಾ)೨೫,೧೬೮ (೨೩)
೨೦೦೪	ಕೃಷ್ಣರಾಜನಗರ	ಮಹಾದೇವ ಜನತಾದಳ (ಜಾ) ೪೦,೩೪೧(೩೫.೩೨)	ಭಾ.ರಾ.ಕಾಂ ೪೦,೦೧೮ (೩೫.೦೪)
೨೦೦೮	ಕೃಷ್ಣರಾಜನಗರ	ಎಸ್.ಆರ್.ಮಹೇಶ್ ೭೭,೩೨೨ (೫೩.೭)	ಭಾ.ರಾ.ಕಾಂ. ೫೬,೭೭೪ (೩೯.೪)

* * * *